ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಚಾವಿಸನಿನಿ. ಕೆ.ಆರ್ ನಗರ-571602
Telephone No: 08223-262933

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
Assistant Executive Engineer,
CESC, K.R Nagar-571602
**Web Site: www.cescmysore.org.**
E-mail:aeekrnagara@cescmysore.org

Company Identity Number[CIN]:- **U40109KA2004SGC035177**

ಕ್ರಮಾಂಕ: ಸಂ:ಸಕಾನಿಇಂ(ವಿ)/ಸೆಸ್ಕ್/ಕೃರಾನ/ಹಿಸ /ಎಫ್-/21-22/906 ದಿನಾಂಕ:27.12.2021
ಲಗತ್ತು:

ದಿನಾಂಕ: 27.12.2021 ರ ಬೆಳಗ್ಗೆ 11 ಗಂಟೆಗೆ ಶ್ರೀ ಚಂದ್ರಶೇಖರ್, ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ, ಕೆ.ಆರ್ ನಗರ ರವರ ಅಧ್ಯಕ್ಷತೆಯಲ್ಲಿ ಕೆ.ಇ.ಆರ್.ಸಿ ನಿರ್ದೇಶನದ ಮೇರೆಗೆ ಕೆ.ಆರ್ ನಗರ ಉಪ ವಿಭಾಗ ಕಛೇರಿಯಲ್ಲಿ ನಡೆಸಲಾದ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು

1. ಶ್ರೀ ಹೆಚ್.ಸಿ ಅರಕೇಶಮೂರ್ತಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾಲನಾ ಉಪ-ವಿಭಾಗ ಚಾ.ವಿ.ಸ.ನಿ.ನಿ, ಕೆ.ಆರ್ ನಗರ
2. ಶ್ರೀ ಶ್ರೀನಿವಾಸ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ಕ),ಸೆಸ್ಕ್, ಕಾ ಮತ್ತು ಪಾ ವಿಭಾಗ, ಕೆ.ಆರ್ ನಗರ
3. ಶ್ರೀ ವೆಂಕಟೇಶ್, ಪ್ರಭಾರ ಲೆಕ್ಕಾಧಿಕಾರಿಗಳು, ಸೆಸ್ಕ್, ಕಾ ಮತ್ತು ಪಾ ವಿಭಾಗ, ಕೆ.ಆರ್ ನಗರ
4. ಶ್ರೀ ವಿಶ್ವನಾಥ್ ಪಾಟೀಲ್, ಸಹಾಯಕ ಇಂಜಿನಿಯರ್(ವಿ),ಸೆಸ್ಕ್, ಕಾ ಮತ್ತು ಪಾ ಉಪ-ವಿಭಾಗ, ಕೆ.ಆರ್ ನಗರ
5. ಶ್ರೀ ಪ್ರಸನ್ನಕುಮಾರ್, ಸಹಾಯಕ ಇಂಜಿನಿಯರ್(ವಿ), ಸೆಸ್ಕ್, ಕಾ ಮತ್ತು ಪಾ ಶಾಖಾ ಕಛೇರಿ ಟೌನ್ ಶಾಖೆ, ಕೆ.ಆರ್ ನಗರ
6. ಶ್ರೀ ಬಿ.ಆರ್ ಮಹದೇವ, ಪ್ರಭಾರ ಹಿರಿಯ ಸಹಾಯಕ, ಕಂದಾಯ ಶಾಖೆ, ಕಾ ಮತ್ತು ಪಾಲನಾ ಉಪ-ವಿಭಾಗ ಚಾ.ವಿ.ಸ.ನಿ.ನಿ, ಕೆ.ಆರ್ ನಗರ
7. ಶ್ರೀ ಚಂದ್ರಶೇಖರ್, ಕಿರಿಯ ಇಂಜಿನಿಯರ್(ವಿ),ಹಂಪಾಪುರ ಕಾ ಮತ್ತು ಪಾ ಶಾಖೆ, ಚಾ.ವಿ.ಸ.ನಿ.ನಿ.,ಕೆ.ಆರ್ ನಗರ ಉಪ-ವಿಭಾಗ
8. ಶ್ರೀ ಮಹದೇವ ಬಿ, ಕಿರಿಯ ಇಂಜಿನಿಯರ್(ವಿ), ಹೊಸೂರು ಕಾ ಮತ್ತು ಪಾ ಶಾಖೆ, ಚಾ.ವಿ.ಸ.ನಿ.ನಿ., ಕೆ.ಆರ್ ನಗರ ಉಪ-ವಿಭಾಗ
9. ಶ್ರೀ ಎಸ್.ಎಲ್ ಕಾಶೀರಾವ್, ಕಿರಿಯ ಇಂಜಿನಿಯರ್(ವಿ), ಹೆಬ್ಬಾಳು ಕಾ ಮತ್ತು ಪಾ ಶಾಖೆ, ಕೆ.ಆರ್ ನಗರ ಉಪ-ವಿಭಾಗ
10. ಶ್ರೀಮತಿ ಸ್ಮಿತಾ, ಕಿರಿಯ ಇಂಜಿನಿಯರ್(ವಿ), ಬಸವರಾಜಪುರ ಕಾ ಮತ್ತು ಪಾ ಶಾಖೆ, ಕೆ.ಆರ್ ನಗರ ಉಪ-ವಿಭಾಗ

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗು ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು.

ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾ ಮತ್ತು ಪಾ ವಿಭಾಗ, ಕೆ.ಆರ್ ನಗರರವರು ವಿದ್ಯುತ್ ಗ್ರಾಹಕ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದನ್ವಯ ಪ್ರತಿ 3 ತಿಂಗಳಿಗೊಮ್ಮೆ ಉಪ-ವಿಭಾಗದ ಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆಯನ್ನು ನಡೆಸಲಾಗುವುದು. ಈ ಸಭೆಯಲ್ಲಿ ಉಪ-ವಿಭಾಗ ವ್ಯಾಪ್ತಿಯ ಗ್ರಾಹಕರುಗಳು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದುಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

Scanned with CamScanner

ಸಭೆಯಲ್ಲಿ ತಿಳಿಸಿದಂತಹ ಅಹವಾಲುಗಳು ಈ ಕೆಳಕಂಡತಿರುತ್ತವೆ.

| ಕ್ರಮ ಸಂಖ್ಯೆ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1 | ಶ್ರೀಮತಿ ನೇತ್ರಾವತಿ ಕೋಂ ನಾಗೇಗೌಡ, ಚೀರನಹಳ್ಳಿ ರಸ್ತೆ ಕೆ.ಆರ್ ನಗರ | ಸೋಲಾರ್ ರಿಯಾಯಿತಿ ಸೌಲಭ್ಯ ಬಳಕೆಯಾಗದೇ ಇರುವ ಬಗ್ಗೆ. | |
| | | ತಾತ್ಕಾಲಿಕ ವಿದ್ಯುತ್ ಸ್ಥಾವರಕ್ಕೆ ಪಾವತಿಸಲಾದ ಹಣವನ್ನು ಶಾಶ್ವತ ಆರ್.ಆರ್ ಸಂಖ್ಯೆಗೆ ವರ್ಗಾವಣೆ ಮಾಡದೇ ಇರುವುದರ ಬಗ್ಗೆ. | ಹಿರಿಯ ಸಹಾಯಕ, ಕಂದಾಯ ಶಾಖೆರವರಿಗೆ ಪರಿಶೀಲಿಸುವಂತೆ ಸೂಚಿಸಲಾಯಿತು. |
| 2 | ಶ್ರೀ ಕರೀಶೆಟ್ಟಿ ಬಿನ್ ದೇವಶೆಟ್ಟಿ ಕೆಸ್ತೂರು ಕೊಪ್ಪಲು ಗ್ರಾಮ, ಕೆ.ಆರ್ ನಗರ ತಾಲ್ಲೂಕು | ಆರ್.ಆರ್ ಸಂಖ್ಯೆ RGKKS-47391 ಕ್ಕೆ ಮೀಟರ್ ಬದಲಾವಣೆ ಮಾಡಿದೇ ಇರುವ ಬಗ್ಗೆ. | ಹೆಬ್ಬಾಳು ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡುವಂತೆ ಸೂಚಿಸಲಾಯಿತು. |
| 3 | ಶ್ರೀ ರವಿ ಸಿ.ಕೆ ಬಿನ್ ಕರೀಗೌಡ, ಚೀರನಹಳ್ಳಿ ಗ್ರಾಮ, ಕೆ.ಆರ್ ನಗರ ತಾಲ್ಲೂಕು | ಆರ್.ಆರ್ ಸಂಖ್ಯೆ HCCHSL-64049 ಕ್ಕೆ ಮನೆಯ ಮುಂದೆ ಹಾದು ಹೋಗಿರುವ ಕಂಬವು ಮುರಿದು ಹೋಗುವ ಸ್ಥಿತಿಯಲ್ಲಿರುವುದರ ಬಗ್ಗೆ | ಹಂಪಾಪುರ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸುವಂತೆ ಸೂಚಿಸಲಾಗಿದೆ. |

ಸಭೆಯ ಕೊನೆಯಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಕೆ.ಆರ್ ನಗರ ರವರು ವಿದ್ಯುತ್ ಗ್ರಾಹಕರಿಂದ ಕೇಳಿ ಬಂದಂತಹ ದೂರುಗಳು ಹಾಗು ಕುಂದುಕೊರತೆಗಳ ಬಗ್ಗೆ ಸವಿವರವಾಗಿ ಮಾತನಾಡಿ ಸಭೆಯಲ್ಲಿಯೇ ಕೆಲವು ಅಹವಾಲುಗಳಿಗೆ ಸಂಬಂಧಿಸಿದಂತೆ ಪರಿಹಾರ ಮಾರ್ಗೋಪಾಯಗಳನ್ನು ಅಧಿಕಾರಿಗಳಿಗೆ ತಿಳಿಸಿ ಹಾಗು ಇತರೆ ಅಹವಾಲುಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳು ಸ್ಥಳ ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಂಡು ತೆಗೆದುಕೊಂಡ ಕ್ರಮದ ಬಗ್ಗೆ ಕಟ್ಟುನಿಟ್ಟಾಗಿ ಅನುಪಾಲನಾ ವರದಿ ನೀಡುವಂತೆ ಸೂಚಿಸಿ, ಸಭೆಯಲ್ಲಿ ಹಾಜರಿದ್ದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ಧನ್ಯವಾದಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಇಂತಿ ತಮ್ಮ ವಿಶ್ವಾಸಿ

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಕಾ ಮತ್ತು ಪಾಲನಾ ಉಪ-ವಿಭಾಗ,
ಚಾ.ವಿ.ಸ.ನಿ.ನಿ.,ಕೆ.ಆರ್. ನಗರ

ಪ್ರತಿಗಳು:-

1. ಅಧೀಕ್ಷಕ ಇಂಜಿನಿಯರ್(ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನಾ ಮೈಸೂರು ವೃತ್ತ, ಮೈಸೂರುರವರ ಮಾಹಿತಿಗಾಗಿ
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ,ಕೆ.ಆರ್ ನಗರರವರ ಮಾಹಿತಿಗಾಗಿ
3. ಹಿ.ಸ/ಮು.ಕ

Scanned with CamScanner